

# ಬುಡಕಟ್ಟು ಮಕ್ಕಳ ಶೈಕ್ಷಣಿಕ ಸಮತೆ

### ಸ್ಥಿತಿಗತಿ,ಸವಾಲುಗಳು, ನೀತಿ ಮತ್ತು ಕಾರ್ಯತಂತ್ರ

## ಚಿಂತನ ಸಪ್ತಾಹ ಶಿಬಿರದ ವಿದ್ಯುನ್ಮಾನ ವಿಚಾರ ಸಂಕಿರಣದ ಪ್ರಮುಖಾಂಶಗಳ ವರದಿ 2021





**ಆಯೋಜಕರು**

ಗ್ರಾಸ್‌ರೂಟ್ಸ್ ರಿಸರ್ಚ್ ಅಂಡ್ ಅಡ್ವೊಕಸಿ ಮೂವ್‌ಮೆಂಟ್
ಮತ್ತು ರಾಜ್ಯ ಮೂಲ ಆದಿವಾಸಿ ವೇದಿಕೆ ಕರ್ನಾಟಕ

**ಸಹಯೋಗ**

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ,
ಮತ್ತು ರೈಸ್ ಪೌಂಡೇಷನ್

@ ಈ ವರದಿಯನ್ನು ‘ಬುಡಕಟ್ಟು ಮಕ್ಕಳ ಶೈಕ್ಷಣಿಕ ಸಮತೆ” ಸ್ಥಿತಿಗತಿ,ಸವಾಲುಗಳು, ನೀತಿ ಮತ್ತು ಕಾರ್ಯತಂತ್ರ ’ ವಿಷಯದಲ್ಲಿ ನಡೆದ ವಿದ್ಯುನ್ಮಾನ ವಿಚಾರ ಸಂಕಿರಣದಲ್ಲಿ ಮಂಡನೆಯಾದ ಮಾಹಿತಿ ಹಾಗೂ ಗ್ರಾಸ್ರೂಟ್ಸ್ ರಿಸರ್ಚ್ ಅಂಡ್ ಅಡ್ವೊಕಸಿ ಮೂವ್ಮೆಂಟ್ ನ ಬುಡಕಟ್ಟು ಆದಿವಾಸಿಗಳೊಂದಿಗಿನ ಒಡನಾಟದ ತಜ್ಞತೆಯಲ್ಲಿ  ಪ್ರಮುಖಾಂಶದ ಮಾಹಿತಿ ಹಾಗೂ ಸಲಹೆಗಳನ್ನು ನೀಡಲಾಗಿದೆ.



# ಬುಡಕಟ್ಟು ಮಕ್ಕಳ ಶೈಕ್ಷಣಿಕ ಸಮತೆ

## ಸ್ಥಿತಿಗತಿ,ಸವಾಲುಗಳು, ನೀತಿ ಮತ್ತು ಕಾರ್ಯತಂತ್ರ

### (ಐದು ದಿನಗಳ ವೆಬಿನಾರ್‌ನ ಮುಖ್ಯಾಂಶಗಳು)

ಭಾರತೀಯ ಸಮಾಜದ ಅತ್ಯಂತ ಶೋಷಿತ ಮತ್ತು ವಂಚಿತ ವಿಭಾಗಗಳಲ್ಲಿ ಆದಿವಾಸಿ ಬುಡಕಟ್ಟು ಜನಾಂಗಗಳು ಕೂಡ ಒಂದು. ಸ್ವಾತಂತ್ರ್ಯಾನಂತರ ರಾಜ್ಯ ಮತ್ತು ರಾಷ್ಟ್ರದಲ್ಲಿ ತಮ್ಮ ಸಾಮಾಜಿಕ ಮತ್ತು ಆರ್ಥಿಕ ಉನ್ನತಿಗಾಗಿ ವಿವಿಧ ರೀತಿಯ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ಅನುಸರಿಸಲಾಗಿದೆ ಮತ್ತು ಕಾರ್ಯಗತಗೊಳಿಸಲಾಗಿದೆ ಎಂಬ ವಾಸ್ತವದ ಹೊರತಾಗಿಯೂ ಎಲ್ಲಾ ಅಭಿವೃದ್ಧಿ ಸೂಚಕಗಳು ಅವರನ್ನು ಮುಖ್ಯವಾಹಿನಿಯ ಭಾರತೀಯ ಸಮಾಜದಿಂದ ಹೊರಗಿಡಲಾಗಿದೆ ಎಂದು ತೋರಿಸುತ್ತದೆ. ಬುಡಕಟ್ಟು ಮಕ್ಕಳು ಇದಕ್ಕೆ ಹೊರತಾಗಿಲ್ಲ. ಈ ವೆಬಿನಾರ್‌ನಲ್ಲಿ, ರಾಜ್ಯದ ಬುಡಕಟ್ಟು ಮಕ್ಕಳ ಶೈಕ್ಷಣಿಕ ಬಹು ಆಯಾಮದ ಸಮಸ್ಯೆಗಳನ್ನು ಗುರುತಿಸಲು ಮತ್ತು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ(ತಿದ್ದುಪಡಿ) ಆದೇಶ ಕಾಯಿದೆ 1976 ಮತ್ತು 1991ರ 39 ರ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 50 ಬಗೆಯ ಜನಾಂಗೀಯ ಗುಂಪುಗಳನ್ನು ಪರಿಶಿಷ್ಟ ಪಂಗಡ ಸಮುದಾಯಗಳು ಎಂದು ಸೂಚಿಸಲಾಗಿದೆ. ಎರಡು ವಿಶೇಷ ದುರ್ಬಲ ಬುಡಕಟ್ಟು ಗುಂಪು (ಪಿವಿಟಿಜಿ)ಗಳನ್ನು ಜೇನುಕುರುಬ ಹಾಗೂ ಕೊರಗ ಸಮುದಾಯ ಹಾಗೂ ಅರಣ್ಯ ಆಧಾರಿತ ಬುಡಕಟ್ಟುಗಳಾದ ಸೋಲಿಗ,ಬೆಟ್ಟ ಕುರುಬ, ಪಣಿಯರವ,ಪಂಜರಿಯರವ, ಕುಡಿಯ, ಮಲೆಕುಡಿಯ, ಇರುಳಿಗ, ಹಸಲ, ಗೌಡ್ಲು, ಸಿದ್ದಿ ಸಮುದಾಯದವರು ರಾಜ್ಯದ ಅರಣ್ಯದಂಚಿನಲ್ಲಿ ಹಲವಾರು ದಶಕಗಳಿಂದ ಜೀವನ ನಡೆಸುತ್ತಿದ್ದಾರೆ. 2011 ರ ಜನಗಣತಿಯ ಪ್ರಕಾರ ಕರ್ನಾಟಕದ ಒಟ್ಟು ಜನಸಂಖ್ಯೆಯ 6,10,95,297 ಇದ್ದು. ಇದರಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ 4248987 ಇದೆ, ಎಸ್ ಟಿ ಜನಸಂಖ್ಯೆಯು ರಾಜ್ಯ ಜನಸಂಖ್ಯೆಯ ಶೇಕಡ 6.95 ರಷ್ಟಿದ್ದರೆ, ಕರ್ನಾಟಕದ ಪರಿಶಿಷ್ಟ ಪಂಗಡಗಳ ಸಾಕ್ಷರತೆಯು ಕಳವಳಕ್ಕೆ ಕಾರಣವಾಗಿದೆ. ಇವರ ಸಾಕ್ಷರತೆಯ ಪ್ರಮಾಣ 2001 ರಲ್ಲಿ ಶೇಕಡ 45.3ರಷ್ಟಿದ್ದದ್ದು. 2011 ರಲ್ಲಿ 53.9 ಕ್ಕೆ ಏರಿದೆ. ರಾಜ್ಯದ ಸಾಕ್ಷರತೆಯ ದರ ಶೇಕಡ 75 ಇದೆ.

ಸಂವಿಧಾನದ ಆಶಯದಂತೆ ಈ ಸಮುದಾಯದ ಶೈಕ್ಷಣಿಕಾಭಿವೃದ್ಧಿಗಾಗಿ ವಿಶೇಷ ಸೌಲಭ್ಯಗಳನ್ನು ಪರಿಶಿಷ್ಟ ವರ್ಗದವರಿಗೆ ನೀಡಲಾಗುತ್ತಿದೆ. 330, 332, 335, 338 ಮತ್ತು 342 ವಿಧಿಗಳು ಬುಡಕಟ್ಟು ಸಮುದಾಯದವರ ಸರ್ವಾಂಗೀಣ ಅಭಿವೃದ್ಧಿಗಾಗಿ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಐತಿಹಾಸಿಕ ಮತ್ತು ಭೌಗೋಳಿಕ ಕಾರಣಗಳಿಂದಾಗಿ ಬುಡಕಟ್ಟು ಸಮುದಾಯಗಳ ಮಕ್ಕಳು ವಿವಿಧ ಹಂತಗಳಲ್ಲಿ ಅನಾನುಕೂಲಗಳಿಗೆ ಒಳಗಾಗಿದ್ದಾರೆ. ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ, ತಾವು ಶಾಲೆಗೆ ಹೋಗಿ ಕಲಿಯುವ ವಿದ್ಯೆ ಬಹಳಷ್ಟು ವೇಳೆ ತಮ್ಮ ಬದುಕಿಗೆ ಅಸಂಗತವಾಗಿ, ಹೊರಗಿನಿಂದ ಹೇರುತ್ತಿರುವ ಶಿಕ್ಷಣ ಎಂಬುದಾಗಿ ಕಂಡುಬರುತ್ತಿದೆ. ಅರ್ಹ ಶಿಕ್ಷಕರನ್ನು ಸೇರಿಸಿಕೊಳ್ಳುವುದು, ಬೋದನೆಗೆ ಸೂಕ್ತ ಭಾಷೆಯ ನಿರ್ಧಾರ ಕೆಲವು ತೊಂದರೆಗಳಿAದ ಕೂಡಿದೆ. ವಿವಿಧ ಹಂತಗಳಲ್ಲಿ ಹಾಜರಾತಿಯ ಕೊರತೆ, ಮಧ್ಯದಲ್ಲಿಯೇ ಶಾಲೆ ಬಿಡುವವರ ದರ ಜಾಸ್ತಿ ಇದೆ ಹೀಗಾಗಿ ಮಕ್ಕಳು ಶೈಕ್ಷಣಿಕವಾಗಿ ಹೆಚ್ಚು ದುರ್ಬಲರಾಗಿದ್ದಾರೆ.

ಬುಡಕಟ್ಟು ಮಕ್ಕಳ ಶೈಕ್ಷಣಿಕಾಭಿವೃದ್ಧಿಗೆ ಸ್ವಾತಂತ್ರ್ಯ ಪೂರ್ವದಲ್ಲಿ ಮಾತ್ರವಲ್ಲದೇ ಸ್ವಾತಂತ್ರ್ಯದ ನಂತರದಲ್ಲಿಯೂ ಸಹಾ ಸಂವಿಧಾನಬದ್ಧವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಸೌಲಭ್ಯಗಳನ್ನು ಕಲ್ಪಿಸುತ್ತಿವೆ. ಆದರೆ ನಿರೀಕ್ಷಿತ ಮಟ್ಟದಲ್ಲಿ ಬುಡಕಟ್ಟು ಸಾಕ್ಷರತೆ ಮತ್ತು ಶೈಕ್ಷಣಿಕಮಟ್ಟ ಅಭಿವೃದ್ಧಿಯಾಗಿಲ್ಲ. ಬುಡಕಟ್ಟು ಮಕ್ಕಳ ಪರಿಣಾಮಾತ್ಮಕ ಬೋಧನೆಗೆ ಮತ್ತು ಬುಡಕಟ್ಟು ಮಕ್ಕಳ ಶೈಕ್ಷಣಿಕ ಸಮಸ್ಯೆಗಳ ಪರಿಹಾರ ಇನ್ನೂ ಸಿಕ್ಕಿಲ್ಲ. ಕೋವಿಡ್ ವಿಶ್ವದ್ಯಾದಂತ ಮಕ್ಕಳ ಶಿಕ್ಷಣದ ಮೇಲೆ ಪರಿಣಾಮ ಬೀರಿದೆ. ಶಾಲೆಗಳು ಮುಚ್ಚಲ್ಪಟ್ಟಿವೆ. ಕಾಡಂಚಿನ ಜನರ ಮಕ್ಕಳ ಶಿಕ್ಷಣದ ಮೇಲೆ ಮತ್ತಷ್ಟು ಪರಿಣಾಮ ಬೀರಿದೆ
ಮಹಾತ್ಮಗಾಂಧಿಯವರ ನೇತೃತ್ವದಲ್ಲಿ ನಡೆದ 'ರಾಷ್ಟ್ರೀಯ ಚಳುವಳಿ' ಬುಡಕಟ್ಟು ಜನಾಂಗದ ಶಿಕ್ಷಣಕ್ಕೆ ಸಾಂಸ್ಕೃತಿಕ ಸ್ವರೂಪ ನೀಡಿದವು. ಗಾಂಧೀಜಿಯವರ ತತ್ವಗಳಿಂದ ಪ್ರಭಾವಿತರಾದ ಜನಪ್ರಿಯರಾದ ಠಕ್ಕರ್ ಬಾಪು ಅವರು ಗುಜರಾತ್ ಹಾಗೂ ಮಹಾರಾಷ್ಟ್ರಗಳಲ್ಲಿ ಆಶ್ರಮ ಶಾಲೆಗಳನ್ನು ತೆರೆದರು. ಈ ಹಿನ್ನಲೆಯಲ್ಲಿ 152ನೇ ಗಾಂಧಿ ಜಯಂತಿಯ ಪ್ರಯುಕ್ತ 5 ದಿನಗಳ ಚಿಂತನಾ ಸಪ್ತಾಹ ವಿದ್ಯುನ್ಮಾನ ವಿಚಾರ ಸಂಕಿರಣ ಹಮ್ಮಿಕೊಳ್ಳಲು ಉದ್ದೇಶಿಸಿ. ಶೈಕ್ಷಣಿಕ ಸಾರ್ವಜನಿಕ ಕಾರ್ಯ ನೀತಿ ಮತ್ತು ಅನುಷ್ಠಾನದ ಪರಿಮಿತಿಯಲ್ಲಿ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- **ಗುಡ್ಡಗಾಡು ಮಕ್ಕಳ ಶೈಕ್ಷಣಿಕ ವ್ಯವಸ್ಥೆ ಮತ್ತು ಪರಿಣಾಮ : ಶಾಲೆಗಳ ಲಭ್ಯತೆ-ಸವಾಲು-ಮಕ್ಕಳ ಶೈಕ್ಷಣಿಕ ಪ್ರಗತಿ ಮೇಲೆ ಪರಿಣಾಮ**
- **ವಿಶೇಷ (ಆಶ್ರಮ) ಶಾಲೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಶಾಲೆಗಳು ಯಾವುದು ಹೆಚ್ಚು ಸೂಕ್ತ? ಇರುವ ಇತಿಮಿತಿಗಳೇನು? ಸಂಯೋಜನೆ ಹೇಗೆ?**
- **ಬುಡಕಟ್ಟು ಹೆಣ್ಣು ಮಕ್ಕಳ ಶಿಕ್ಷಣ, ಪ್ರಸ್ತುತ ಸ್ಥಿತಿಗತಿ, ಅಡೆತಡೆಗಳು.**
- **ಬುಡಕಟ್ಟು ಮಕ್ಕಳ ಕಲಿಕೆಗೆ ಪೂರಕ ಪಠ್ಯಕ್ರಮ ಸಾಹಿತ್ಯದ ಲಭ್ಯತೆ ಮತ್ತು ಅಗತ್ಯತೆ?**
- **ಬುಡಕಟ್ಟು ಮಕ್ಕಳ ಉನ್ನತ ಶಿಕ್ಷಣ ಮತ್ತು ಅಗತ್ಯ ಕೌಶಲ್ಯ ವಸ್ತುಸ್ಥಿತಿ, ಸಾಧ್ಯತೆಗಳು.**

## ಕೌಟುಂಬಿಕ -ಸಮುದಾಯ ಮತ್ತು ಸಾಮಾಜಿಕ ಸವಾಲುಗಳು



- ಬುಡಕಟ್ಟು ಜನಾಂಗದಲ್ಲಿನ ಒಳಪಂಗಡಗಳಲ್ಲಿ ಶೈಕ್ಷಣಿಕ ಸಮತೆಯಲ್ಲಿ ಭಿನ್ನತೆ ಇದೆ. ಉದಾಹರಣೆಗೆ ಜೇನು ಕುರುಬ ಸಮುದಾಯದಲ್ಲಿ ಅಂದಾಜು ಕೇವಲ 5% ಅಷ್ಟೇ ಸಾಕ್ಷರತೆಯನ್ನು ನೋಡಬಹುದಾಗಿದೆ. ಎಸ್ ಟಿ ಮೀಸಲಾತಿಗೆ ಗೆ ಎಲ್ಲಾ ರೀತಿಯ ಆದಿವಾಸಿ ಸಮುದಾಯಗಳನ್ನು ಸೇರಿಸಿರುವುದರಿಂದ ಮುಖ್ಯವಾಹಿನಿಯಲ್ಲಿರುವ ನಾಯಕ ಸಮುದಾಯದಂತಹ ಸಮುದಾಯಗಳು ಮಾತ್ರ ಇದರ ಸೌಲಭ್ಯವನ್ನು ಬಳಸಿಕೊಳ್ಳುತ್ತಿವೆ.
- ಅರ್ಧಕ್ಕೆ ಶಾಲೆ ಬಿಡುವವರ ಸಂಖ್ಯೆ ಬುಡಕಟ್ಟು ಸಮುದಾಯದಲ್ಲಿ ಸಾಮಾನ್ಯವಾಗಿ ಬಿಟ್ಟಿದೆ. ಶಿಕ್ಷಣದ ಅಗತ್ಯ ಹಾಗು ಮಹತ್ವದ ಬಗ್ಗೆ ಇಂದಿಗೂ ಸಂಪೂರ್ಣ ಜಾಗೃತಿ ಬುಡಕಟ್ಟು ಸಮುದಾಯಗಳಲ್ಲಿ ಇಲ್ಲ.
- ಕುಟುಂಬದ ಆದಾಯವು ಮಕ್ಕಳ ಶಿಕ್ಷಣವನ್ನು ನಿರ್ಧರಿಸುವಲ್ಲಿ ಪ್ರಮುಖವಾದ ಪಾತ್ರ ವಹಿಸುವುದರ ಜೊತೆಗೆ ತನ್ನದೆಯಾದ ಪ್ರಭಾವವನ್ನು ಬೀರುತ್ತದೆ. ಆದರೆ ಬುಡಕಟ್ಟು ಜನರ ಆದಾಯದಿಂದ ಮೂಲಭೂತ ಅವಶ್ಯಕತೆಗಳಾದ ಆಹಾರ, ಬಟ್ಟೆ, ವಸತಿ, ಆರೋಗ್ಯ ಇವುಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗದೇ ಇರುವಾಗ ಮಕ್ಕಳ ಶಿಕ್ಷಣದ ಬಗ್ಗೆ ಗಮನ ಹರಿಸುವುದು ಕಷ್ಟದ ವಿಚಾರವಾಗಿದೆ.
- ಆದಾಯವನ್ನು ನಿರ್ಧರಿಸುವಲ್ಲಿ ಭೂಹಿಡುವಳಿಯ ಗಾತ್ರ ಪ್ರಮುಖವಾದ ಅಂಶವಾಗಿದೆ. ಬುಡಕಟ್ಟು ಕುಟುಂಬಗಳು ಯಾವುದೇ ರೀತಿಯ ಜಮೀನನ್ನು ಹೊಂದಿರುವುದಿಲ್ಲ. ಜಮೀನು ಹೊಂದಿರುವವರಲ್ಲಿ ಭೂ ಹಿಡುವಳಿಯ ಗಾತ್ರವನ್ನು ಗಮನಿಸಿದಾಗ ಎಲ್ಲಾ ಬುಡಕಟ್ಟುಗಳಲ್ಲಿಯು ಕೇವಲ 1 ರಿಂದ 2 ಎಕರೆ ಜಮೀನನ್ನು ಮಾತ್ರ ಹೊಂದಿದ್ದಾರೆ. ಬುಡಕಟ್ಟುಗಳಲ್ಲಿಯೂ ನೀರಾವರಿ ಜಮೀನಿಗಿಂತ ಮಳೆಯಾಶ್ರಿತ ಜಮೀನು ಹೊಂದಿರುವ ಪ್ರಮಾಣ ಹೆಚ್ಚಾಗಿದ್ದು, ವ್ಯವಸಾಯಕ್ಕೆ ಮಳೆಯನ್ನೇ ಅವಲಂಬಿಸಿಕೊಂಡಿರುವುದು ಅಧಿಕವಾಗಿದೆ.
- ಜಮೀನು ಹೊಂದಿರುವವರಲ್ಲಿ ಕಾಡು ಪ್ರಾಣಿಗಳ ಹಾವಳಿ, ಬಂಡವಾಳದ ಕೊರತೆ, ಬರಗಾಲ ಮುಂತಾದ ಕಾರಣಗಳಿಂದ ಕುಟುಂಬಗಳು ವ್ಯವಸಾಯ ಮಾಡದೇ ಪಾಳುಬಿಟ್ಟಿದ್ದಾರೆ. ತಮ್ಮ ಜಮೀನನ್ನು ಸ್ಥಳೀಯ ಮತ್ತು ನೆರೆಯ ರಾಜ್ಯಗಳಾದ ಕೇರಳ ಹಾಗೂ ತಮಿಳುನಾಡಿನಿಂದ ವಲಸೆ ಬಂದ ವ್ಯವಸಾಯಗಾರರಿಗೆ ವರ್ಷಕ್ಕೆ ಎಕರೆಗೆ ಕೇವಲ ೪ ರಿಂದ ೬ ಸಾವಿರ ರೂಪಾಯಿಗಳಿಗೆ ಗುತ್ತಿಗೆಗೆ ನೀಡಿದ್ದಾರೆ.
- ಬುಡಕಟ್ಟು ಕುಟುಂಬಗಳು ವಾಸಿಸುವ ಮನೆಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯಿದ್ದು, ಮಕ್ಕಳು ಶಿಕ್ಷಣ ಪಡೆಯಲು ಪೂರಕವಾದ ವಾತಾವರಣವಿಲ್ಲ.ಕನಿಷ್ಠ ವಿದ್ಯುತ್ಚ್ಛಕ್ತಿಯ ಲಭ್ಯತೆ ನಿರಂತರವಾಗಿರುವುದಿಲ್ಲ.

## ಸಲಹೆಗಳು

- ಸರ್ಕಾರವು ಅನುಷ್ಠಾನಗೊಳಿಸುತ್ತಿರುವ ಸಾಮಾಜಿಕ ಮತ್ತು ಆರ್ಥಿಕಾಭಿವೃದ್ಧಿ ಮತ್ತು ಶೈಕ್ಷಣಿಕಾಭಿವೃದ್ದಿ ಕಾರ್ಯಕ್ರಮಗಳು, ಶೈಕ್ಷಣಿಕ ಅವಕಾಶಗಳು ಹಾಗೂ ಇತರ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಅಂದರೆ ಉಚಿತ ಶಿಕ್ಷಣ, ಶಿಕ್ಷಣ ಹಕ್ಕು ಕಾಯ್ದೆ, ಅರಣ್ಯ ಹಕ್ಕು ಕಾಯ್ದೆ ಮುಂತಾದ ಸೌಲಭ್ಯಗಳ ಬಗ್ಗೆ ಬುಡಕಟ್ಟು ಜನರಲ್ಲಿ ಅರಿವು ಮೂಡಿಸುವುದು ಅತ್ಯವಶ್ಯಕಗಳಲ್ಲಿ ಒಂದಾಗಿದೆ.
- ಶಾಲೆಯಲ್ಲಿ ಗುಣಾತ್ಮಕ ಶಿಕ್ಷಣವನ್ನು ನಿರ್ವಹಣೆ ಮಾಡುವುದರಲ್ಲಿ ಸಮುದಾಯದ ಸಹಭಾಗಿತ್ವ ಹೆಚ್ಚಾಗಬೇಕಾಗಿದೆ. ಪೋಷಕರನ್ನು ಶಾಲೆಗೆ ಬರುವಂತಹ ಚಟುವಟಿಕೆಗಳು ಕಾರ್ಯರೂಪಕ್ಕೆ ತರಬೇಕಾಗಿದೆ.
- ಪೋಷಕರು ಮತ್ತು ಶಿಕ್ಷಕರ ನಡುವಿನ ಸಂಬಂಧವನ್ನು ಅಭಿವೃದ್ಧಿಪಡಿಸಬೇಕಾಗಿದೆ. ಪೋಷಕರಿಗೆ ಮತ್ತು ಸಮಾನ ಸಮುದಾಯದವರಿಗೆ ಶಿಕ್ಷಣದ ಬಗ್ಗೆ ಶಾಲೆ ಅಗತ್ಯತೆಗಳ ಬಗ್ಗೆ ಮತ್ತು ಮಕ್ಕಳು ಕಲಿತು ಮುಂದೆ ಜೀವನ ಸಾಗಿಸುವ ಬಗ್ಗೆ ಅವರಿಗೆ ವಿಷಯಗಳನ್ನು ತಿಳಿಸಬೇಕಾಗಿದೆ



## ಪೂರ್ವ ಪ್ರಾಥಮಿಕ ಶಿಕ್ಷಣ -ಬೆಳವಣಿಗೆ

ಬುಡಕಟ್ಟು ಮಕ್ಕಳ ಶೈಕ್ಷಣಿಕ ಸ್ಥಿತಿಗತಿಯನ್ನು ನೋಡಿದಾಗ 3 ರಿಂದ 6 ವರ್ಷದೊಳಗಿನ ಮಕ್ಕಳು ಅಂಗನವಾಡಿ (ಪೂರ್ವ ಪ್ರಾಥಮಿಕ ಶಾಲೆ)ಗೆ ಹಾಜರಾಗುತ್ತಿಲ್ಲ. ಜೇನುಕುರುಬರು ವಾಸಿಸುವ ಬಹುತೇಕ ಹಾಡಿಗಳಲ್ಲಿ ಅಂಗನವಾಡಿ ಕೇಂದ್ರವಿಲ್ಲ. ಅಂಗನವಾಡಿ ಕೇಂದ್ರವಿರುವ ಕಡೆ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಅಂಗನವಾಡಿ ಕಾರ್ಯಕರ್ತೆಯರು ಬೇರೆ ಹಾಡಿ ಅಥವಾ ಗ್ರಾಮದವರಾಗಿರುವುದರಿಂದ ಸೂಕ್ತ ಸಮಯಕ್ಕೆ ಬಾಗಿಲು ತೆರೆಯುವುದಿಲ್ಲ ಮತ್ತು ಅಂಗನವಾಡಿಗಳು ಸಹ ಮೂಲಭೂತ ಸೌಕರ್ಯಗಳ ಕೊರತೆಯಿಂದ ಮಕ್ಕಳನ್ನು ಆಕರ್ಷಿಸುವಲ್ಲಿ ವಿಫಲವಾಗಿವೆ.

ಅಂಗನವಾಡಿ ಕೇಂದ್ರಗಳಲ್ಲಿ ಕೊಡುವ ಆಹಾರ ಹೆಚ್ಚಿನ ಮಕ್ಕಳಿಗೆ ಹೊಂದಿಕೆಯಾಗುವುದಿಲ್ಲ ಮತ್ತು ಸ್ಥಳೀಯ ಆಹಾರ ಪದ್ಧತಿಗೆ ಪೂರಕವಾಗಿರುವುದಿಲ್ಲ. ಈ ಅಂಶದಿಂದಲೇ ಬಹುತೇಕ ತಾಯಂದಿರು ತಮ್ಮ ಮಕ್ಕಳನ್ನು ಅಂಗನವಾಡಿಗೆ ಕಳುಹಿಸುತ್ತಿಲ್ಲ. ಮಕ್ಕಳ ಕಲಿಕೆ, ಬೆಳವಣಿಗೆಯ ತರ್ಕಕ್ಕಿಂತ ಕೂಲಿಗೆ ಹೋಗುವ ಸಲುವಾಗಿ ಮಕ್ಕಳನ್ನು ಅಂಗನವಾಡಿಗೆ ಮತ್ತು ಶಾಲೆಗೆ ಕಳುಹಿಸುತ್ತಿರುವುದು ಕಂಡು ಬಂದಿದೆ.

## ಸಲಹೆ

ಕಿರಿಯ ಮಕ್ಕಳ ಪೋಷಣೆಗಾಗಿ ಹಿರಿಯ ಮಕ್ಕಳು ನಿಯಮಿತವಾಗಿ ಶಾಲೆಗೆ ಹೋಗಲು ಸಾಧ್ಯವಾಗದೆ ಮಧ್ಯಂತರದಲ್ಲಿ ಶಾಲೆ ಬಿಡುತ್ತಿದ್ದಾರೆ. ಬಹುತೇಕ ಹಾಡಿಗಳಲ್ಲಿ ಅದರಲ್ಲೂ ಜೇನುಕುರುಬ ಬುಡಕಟ್ಟು ಜನರು ವಾಸಿಸುವ ಹಾಡಿಗಳಲ್ಲಿ ಯಾವುದೇ ರೀತಿಯ ಶಿಶುಪಾಲನ ಕೇಂದ್ರವಾಗಲಿ ಅಥವಾ ಅಂಗನವಾಡಿಯಾಗಲಿ ಇಲ್ಲ. ಆದ್ದರಿಂದ ಬುಡಕಟ್ಟು ಹಾಡಿಗಳಲ್ಲಿ ಶಿಶು ಪಾಲನ ಕೇಂದ್ರ/ ಅಂಗನವಾಡಿಗಳನ್ನು ಸ್ಥಾಪಿಸಬೇಕು. ಹಾಗೂ ಸ್ಥಳೀಯ ವಿದ್ಯಾವಂತ ಬುಡಕಟ್ಟು ಮಹಿಳೆಯರನ್ನು ಕಾರ್ಯಕರ್ತರಾಗಿ ಹಾಗೂ ಅಡುಗೆ ಸಹಾಯಕರನ್ನಾಗಿ ನೇಮಿಸಬೇಕು ಮತ್ತು ಅಂಗನವಾಡಿಯಲ್ಲಿ ಉತ್ತಮ ಪರಿಸರ ಕಲ್ಪಿಸುವುದು ಅವಶ್ಯಕವಾಗಿದೆ.

## ಸಾರ್ವಜನಿಕ ಶಿಕ್ಷಣ ಇಲಾಖೆಯ ಶಾಲೆ- ಆಶ್ರಮ ಶಾಲೆ ಸ್ಥಿತಿಗತಿ-ಸವಾಲುಗಳು

- ಪ್ರಸ್ತುತ ಕಾರ್ಯನಿರ್ವಹಿಸುತ್ತರುವ ಶಿಕ್ಷಕರು ಬುಡಕಟ್ಟೇತರರಾಗಿರುವುವುದರಿಂದ ಬುಡಕಟ್ಟು ಸಮುದಾಯದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಜೀವನ ಶೈಲಿಯ ಅರಿವು ಮತ್ತು ಬುಡಕಟ್ಟು ಭಾಷೆಯ ಬಗ್ಗೆ ಜ್ಞಾನವಿರುವುದಿಲ್ಲ. ಈ ಎಲ್ಲಾ ಅಂಶಗಳು ಮಕ್ಕಳ ಶಿಕ್ಷಣದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಏಕೆಂದರೆ ಶಿಕ್ಷಕರು 2 ರಿಂದ 3 ವರ್ಷ ಬುಡಕಟ್ಟು ಪ್ರದೇಶದಲ್ಲಿ ಕಾರ್ಯನಿರ್ವಹಿಸಿ ಬುಡಕಟ್ಟು ಸಮುದಾಯಗಳ ಸಾಮಾಜಿಕ, ಸಾಂಸ್ಕೃತಿಕ, ಭೌಗೋಳಿಕ ಪರಿಸರ, ಪೋಷಕರ ಮತ್ತು ಮಕ್ಕಳ ಮನಸ್ಥಿತಿ ಮತ್ತು ಪರಿಸ್ಥಿತಿ ಅರಿವಾಗಿ ಅಲ್ಲಿನ ಮಕ್ಕಳಿಗೆ ತಕ್ಕಂತೆ ಬೋಧಿಸುವುದನ್ನು ರೂಢಿಸಿಕೊಳ್ಳುವಷ್ಟರಲ್ಲಿ ಬೇರೆಡೆಗೆ ವರ್ಗಾವಣೆ ಮಾಡಿಸಿಕೊಳ್ಳುತ್ತಾರೆ.
- ಬಹುತೇಕ ಹಾಡಿಗಳಲ್ಲಿ ಒರ್ವ ಶಿಕ್ಷಕರೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಬ್ಬರು ಶಿಕ್ಷಕರಿರುವ ಕಡೆ ಒರ್ವ ಶಿಕ್ಷಕರು ಶಾಲೆಗೆ ಬಂದರೆ ಮತ್ತೊಬ್ಬರು ಬರುವುದಿಲ್ಲವಾದ್ದರಿಂದ ಒರ್ವಶಿಕ್ಷಕರೇ ಬಹು ವರ್ಗ (1 ರಿಂದ 5ನೇ) ತರಗತಿಗಳನ್ನು ನಿಭಾಯಿಸುವುದು ಕಷ್ಟವಾಗುತ್ತಿದೆ. ಮತ್ತು ಮಕ್ಕಳ ಆಸಕ್ತಿ ಕೊರತೆ ಮತ್ತು ಅನಿಯಮಿತ ಹಾಜರಾತಿ ಈ ಎಲ್ಲಾ ಅಂಶಗಳು ಮಕ್ಕಳ ಕಲಿಕಾ ಪ್ರವೃತ್ತಿಯ ಮೇಲೆ ದುಷ್ಪರಿಣಾಮ ಬೀರುತ್ತಿದೆ.
- ಆಶ್ರಮ ಶಾಲೆಗಳು ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯುತ್ತಿದ್ದು ಅವರು ಆಶ್ರಮ ಶಾಲೆಗಳನ್ನು ಒಂದು ಕಾರ್ಯಕ್ರಮವಾಗಿ ನೋಡುತ್ತಿದ್ದು ಬಂದಂತಹ ಅಧಿಕಾರಿಗಳು ಕೇವಲ ಕಾರ್ಯಕ್ರಮದ ಅನುಷ್ಠಾನ ಅದರ ಸಂಖ್ಯಾತ್ಮಕ ಫಲಿತಾಂಶ, ಆಹಾರದ ಗುಣಮಟ್ಟದ ಪರೀಕ್ಷೆಗೆ ಹೆಚ್ಚು ಕಾಳಜಿ ತೋರಿಸುತ್ತಾರೆ ಹೊರತು ಶಿಕ್ಷಣದ ಗುಣಮಟ್ಟದ ಕೊರತೆ ಎದ್ದು ಕಾಣುತ್ತಿದೆ.
- ದಾಖಲಾತಿ ಹಾಗೂ ಹಾಜರಾತಿಯಲ್ಲಿ ಯಾವುದೇ ರೀತಿಯ ಹೆಚ್ಚಿನ ಬದಲಾವಣೆ ಸಾಧ್ಯವಾಗಿಲ್ಲ, ಈಗಲೂ ಸಹ ಪೋಷಕರು ಸಹ ತಮ್ಮ ಮಕ್ಕಳ ದಾಖಲಾತಿ ಮಾಡಲು ಬರುತ್ತಿಲ್ಲ ಹಾಗೂ ಶಾಲೆಗಳಿಗೆ ಮಕ್ಕಳನ್ನು ಕರೆತಂದು ಬಿಡುತ್ತಿಲ್ಲ ಇದನ್ನು ಇಂದಿಗೂ ಸಹ ಶಿಕ್ಷಕರುಗಳೇ ಮಾಡುತ್ತಿದ್ದಾರೆ ಎಂದು ತಿಳಿಸಿದರು
- ಆಶ್ರಮ ಶಾಲೆಗಳಲ್ಲಿ ಖಾಯಂ ಶಿಕ್ಷಕರು ಇಲ್ಲ ಅವರನ್ನು ಅರೆ ಕಾಲಿಕ ಶಿಕ್ಷಕರನ್ನಾಗಿ ನೇಮಿಸಿಕೊಳ್ಳಲಾಗುತ್ತಿದೆ ಮತ್ತು ತೀರಾ ಕಡಿಮೆ ವೇತನವನ್ನು ನೀಡಲಾಗುತ್ತಿದೆ.
- ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಕರಿಗೆ ಇರುವಂತಹ ನಿಗದಿತ ವೇತನ ಶ್ರೇಣಿ, ರಜೆ ಮುಂತಾದ ಯಾವುದೇ ಸೌಲಭ್ಯಗಳು ಅವರಿಗಿಲ್ಲ. ಅವರನ್ನು ಮುಂದಿನ ಶೈಕ್ಷಣಿಕ ವರ್ಷಕ್ಕೆ ಮುಂದುವರಿಸುವ ಕೆಲಸವು ಆಗುತ್ತಿಲ್ಲ.
- ಶಿಕ್ಷಕರ ಗೈರು ಹಾಜರಿ ಮತ್ತು ಅವರ ನೀಡುವ ಬೈಗುಳ ಶಿಕ್ಷೆ ಕಾರಣದಿಂದ ಶಾಲೆ ಬಿಡಲು ಕಾರಣವಾಗುತ್ತಿದೆ.
- ಪಠ್ಯಕ್ರಮ ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಆಶ್ರಮ ಶಾಲೆಗಳಲ್ಲಿ ಒಂದೇ, ಅವರ ಪರಿಸರಕ್ಕೆ(ಭಾಷೆ,ಸಂಸ್ಕೃತಿ, ಅನುಸರಣಾ ಸಾಮಾರ್ಥ್ಯ) ತಕ್ಕಂತೆ ಕಲಿಸುವ ಚಾಕಚಕ್ಯತೆ ಶಿಕ್ಷಕರುಗಳ ಕೊರತೆ ಇಂದಿನ ಆದಿವಾಸಿ ಸಮುದಾಯಗಳ ಶೈಕ್ಷಣಿಕ ಪ್ರಗತಿಯ ಕುಂಠಿತಕ್ಕೆ ಕಾರಣವಾಗಿದೆ.
- ಪಠ್ಯ ಪುಸ್ತಕ, ಸಮವಸ್ತ್ರ ಯಾವುದೂ ಆಶ್ರಮ ಶಾಲೆಗೆ ಸಮಯಕ್ಕೆ ಸರಿಯಾಗಿ ತಲುಪುತ್ತಿಲ್ಲ.

- ·ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಸುವ ಅಂತರ್ ಶಾಲಾ ಮಟ್ಟದ ಆಟೋಟ ಸ್ಪರ್ಧೆಗಳಲ್ಲೂ ಆಶ್ರಮ ಶಾಲಾ ವಿದ್ಯಾರ್ಥಿಗಳು ಭಾಗವಹಿಸಲು ಸಾಧ್ಯವಾಗುತ್ತಿಲ್ಲ.
- ·ಆಶ್ರಮ ಶಾಲೆಗಳಲ್ಲಿ ಪ್ರಸ್ತುತ 1 ರಿಂದ 5ನೇ ತರಗತಿಯವರೆಗೆ ಮಾತ್ರ ವಿದ್ಯಾಭ್ಯಾಸಕ್ಕೆ ಅವಕಾಶವಿದೆ. ನಂತರ ಅವರು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧೀನ ಶಾಲೆಗಳಲ್ಲಿ ವಿದ್ಯಾಭ್ಯಾಸ ಮುಂದುವರೆಸಬೇಕಾಗುತ್ತದೆ. ಈ ಹಂತದಲ್ಲಿ ಸಾಕಷ್ಟು ವಿದ್ಯಾರ್ಥಿಗಳು ಶಿಕ್ಷಣದಿಂದ ಹಿಂದೆ ಸರಿಯುತ್ತಾರೆ. ತಮ್ಮ ಶಿಕ್ಷಣವನ್ನು ಅರ್ಧಕ್ಕೇ ಮೊಟಕುಗೊಳಿಸುತ್ತಾರೆ.
- ·ಎಸ್ ಡಿ ಎಂ ಸಿ ಸಮಿತಿಗಳು ನೆಪ ಮಾತ್ರಕ್ಕೆ ಇದ್ದು, ಅವುಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅವರನ್ನು ಸಬಲೀಕರಿಸಬೇಕು.

## ಸಲಹೆ

- ಶಿಕ್ಷಕರು ಹಾಡಿಯಲ್ಲಿಯೇ ನೆಲೆಸುವಂತಾಗಬೇಕು, ಮಕ್ಕಳಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಹೊಂದುವಂತೆ ಮಾಡಬೇಕು, ಬುಡಕಟ್ಟು ಮಕ್ಕಳಲ್ಲಿ ಪೂರ್ವಿಕರಲ್ಲಿದ್ದ ಸಾಂಪ್ರದಾಯಿಕ ಜ್ಞಾನವನ್ನು ಹೆಚ್ಚಿಸುವಂತಹ ಹಾಗೂ ಬುಡಕಟ್ಟು ಸಮಾಜ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸುವಂತಹ, ಗುರು ಹಿರಿಯರಿಗೆ ಗೌರವ ಕೊಡುವುದನ್ನು ಕಲಿಸುವಂತಹ ಶಿಕ್ಷಣವನ್ನು ಕೊಡಬೇಕು
- ಹಾಡಿಗಳಲ್ಲಿ ಸೂಕ್ತ ಸಮಯಕ್ಕೆ ಸರಿಯಾಗಿ ಶಾಲೆಗಳನ್ನು ತೆರೆಯುವುದಿಲ್ಲ. ಜೊತೆಗೆ ಶಿಕ್ಷಕರು ನಿಯಮಿತವಾಗಿ ಶಾಲೆಗೆ ಬರುವುದಿಲ್ಲವಾದ್ದರಿಂದ ಮಕ್ಕಳ ಶಿಕ್ಷಣದ ಮೇಲೆ ದುಷ್ಪರಿಣಾಮ ಬೀರುತ್ತದೆ. ಆದ ಕಾರಣ ಹಿರಿಯ ಅಧಿಕಾರಿಗಳು ಆಗಾಗ್ಗೆ ತಪಾಸಣೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಬೇಕು ಮತ್ತು ಶಿಕ್ಷಕರು ಶಾಲೆಯಲ್ಲೆ ನೆಲೆಸಲು ಉತ್ತಮ ವಸತಿ ವ್ಯವಸ್ಥೆ, ಸಾರಿಗೆ ವ್ಯವಸ್ಥೆಗಳನ್ನು ಕಲ್ಪಿಸಬೇಕು ಹಾಗೂ ಹೊರಗುತ್ತಿಗೆ/ತಾತ್ಕಾಲಿಕ ಶಿಕ್ಷಕರಿಗೆ ಸೂಕ್ತ ಸಮಯಕ್ಕೆ ಸಂಬಳ ನೀಡಬೆಕು.
- ಬುಡಕಟ್ಟು ಭಾಷೆ, ಸಂಸ್ಕೃತಿ, ಜೀವನ ಶೈಲಿ ವಿಭಿನ್ನವಾಗಿರುವುದರಿಂದ ಆ ಮಕ್ಕಳಿಗೆ ಬೋಧಿಸುವ ಶಿಕ್ಷಕರಿಗೆ ವಿಶೇಷ ತರಬೇತಿ ಅವಶ್ಯಕವಾಗಿರುತ್ತದೆ.ಮುಖ್ಯವಾಗಿ ವಿಶೇಷ ಸಂವೇಧನೆ ಬೇಕಿರುತ್ತದೆ. ಸ್ಥಳೀಯ ಡಯಟ್‌ಗಳು ಕಡ್ಡಾಯವಾಗಿ ಬುನಾದಿ ಕೋರ್ಸ್ ನಡೆಸುವುದು ಅಗತ್ಯ.
- ಬುಡಕಟ್ಟು ಮಕ್ಕಳಿಗೆ ಬೋಧಿಸುವಾಗ ಆ ಸಮಾಜದ ಸಂಸ್ಕೃತಿ, ಆಚಾರ, ವಿಚಾರ, ಭಾಷೆ, ಪೋಷಕರ ಮತ್ತು ಮಕ್ಕಳ ಮನೋಭಾವ ತಿಳಿದುಕೊಳ್ಳುವುದು ಅವಶ್ಯಕವಾಗಿರುತ್ತದೆ. ಆಗ ಮಾತ್ರ ಮಕ್ಕಳಲ್ಲಿ ಕಲಿಕಾ ಆಸಕ್ತಿಯನ್ನು ಹೆಚ್ಚಿಸಿ ಮಕ್ಕಳ ಮನಸ್ಥಿತಿಗೆ ಅನುಗುಣವಾಗಿ ಬೋಧಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಬುಡಕಟ್ಟು ಪ್ರದೇಶಗಳಲ್ಲಿರುವ ಶಾಲೆಗಳಿಗೆ ಬುಡಕಟ್ಟು ಶಿಕ್ಷಕರನ್ನೇ ನೇಮಿಸಬೇಕು. ಮತ್ತು ಬುಡಕಟ್ಟು ಮಕ್ಕಳಿಗೆ ಬೋಧಿಸುವ ಬುಡಕಟ್ಟೇತರ ಶಿಕ್ಷಕರರಿಗೆ ಬುಡಕಟ್ಟು ಜನಾಂಗದ ಸಂಸ್ಕೃತಿ, ಆಚಾರ, ವಿಚಾರ, ಭಾಷೆ, ಮತ್ತು ಮಕ್ಕಳ ಮನೋಭಾವಕ್ಕನುಗುಣವಾಗಿ ಬೋಧಿಸಲು ಮಾನವಶಾಸ್ತ್ರಜ್ಞರಿಂದ ವಿಶೇಷವಾದ ತರಬೇತಿ ನೀಡುವುದು ಅತ್ಯವಶ್ಯಕವಾಗಿದೆ.
- ಬುಡಕಟ್ಟು ಸಮುದಾಯಕ್ಕೆ ಸೇರಿದ ಖಾಯಂ ಶಿಕ್ಷಕರನ್ನು ನೇಮಿಸುವುದರ ಜೊತೆಗೆ ಆಶ್ರಮಶಾಲೆಗಳನ್ನು ಪ್ರೌಢಶಾಲೆವರೆಗೆ ವಿಸ್ತರಿಸಿ ಕೇಂದ್ರೀಯ ಮಾದರಿ ಶಾಲೆಗಳಂತೆ ಅಭಿವೃದ್ಧಿಪಡಿಸ ಬೇಕಿದೆ ಹಾಗೂ ಅವುಗಳನ್ನು ಸೂಕ್ತ ಸ್ಥಳದಲ್ಲಿ ಸ್ಥಾಪಿಸಬೇಕು.
- ಶಾಲಾ ಅಲಭ್ಯತೆ ಮತ್ತು ಸಾರಿಗೆ ಸಂಪರ್ಕದ ಕೊರತೆಯಿಂದಾಗಿ ಬಹುತೇಕ ಮಕ್ಕಳು ನಿಯಮಿತವಾಗಿ ಶಾಲೆಗೆ ಹಾಜರಾಗುತ್ತಿಲ್ಲ ಮತ್ತು ಶಾಲೆಯಿಂದ ಹೊರಗುಳಿದಿದ್ದಾರೆ. ಉತ್ತಮ ಸಂಪರ್ಕ ರಸ್ತೆಯ ಜೊತೆಗೆ ಹಾಡಿಯಿಂದ ಶಾಲೆಗೆ ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಿದರೆ ಅನಿಯಮಿತ ಹಾಜರಾತಿ ಮತ್ತು ಮಧ್ಯಂತರದಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ತಡೆಗಟ್ಟಬಹುದಾಗಿದೆ.
- ಶಿಕ್ಷಕರಿಗೆ ತಿಂಗಳಿಗೆ ಒಮ್ಮೆ ಬುಡಕಟ್ಟು ಸಮುದಾಯಕ್ಕೆ ಸಂಬಂಧಿತ ವ್ಯಕ್ತಿಗಳ ಜೊತೆಗೆ ಮಾತುಕತೆ ಚಟುವಟಿಕೆ ಗಳನ್ನು ನಡೆಸುವಂಥದ್ದು ಸಂಸ್ಕೃತಿ ಅವರ ಜೀವನದ ಬಗ್ಗೆ ವಿಚಾರಗಳ ಬಗ್ಗೆ ಶಿಕ್ಷಕರು ಮತ್ತು ಸಂಬಂಧಪಟ್ಟ ವ್ಯಕ್ತಿಗಳ ನಡುವಿನ ಒಂದು ಮಾತುಕತೆಗಳನ್ನು ನಡೆಸುವಂಥದ್ದು
- ಕಾಲಕಾಲಕ್ಕೆ ಎಸ್.ಡಿ.ಎಂ.ಸಿ ಸಮಿತಿ ಸಭೆಗಳನ್ನು ನಡೆಸಿ ಅವುಗಳನ್ನು ಸಬಲೀಕರಿಸಿ, ಶಾಲಾಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವುದು ಹಾಗೂ ಪೋಷಕರ ಸಭೆಗಳನ್ನು ನಡೆಸಿ ಮಕ್ಕಳ ಶಿಕ್ಷಣದ ಬಗ್ಗೆ ಅರಿವು ಮೂಡಿಸುವುದು.
- ಬುಡಕಟ್ಟು ಜನಾಂಗದವರ ಸಾಂಸ್ಕೃತಿಕ ಸೊಗಡನ್ನೂ ಉಳಿಸಿಕೊಂಡು, ಆಧುನಿಕ ಶಿಕ್ಷಣ ಮಾದರಿಯನ್ನೂ ಒಳಗೊಂಡಿರುವ ಶೈಕ್ಷಣಿಕ ಪಠ್ಯಕ್ರಮವನ್ನು ಆಶ್ರಮ ಶಾಲೆಗಳಲ್ಲಿ ಅಳವಡಿಸುವ ಅಗತ್ಯವಿದೆ
- ಬುಡಕಟ್ಟು ಸಮುದಾಯಗಳಲ್ಲಿನ ವಿಶೇಷತೆಗಳು ಹಾಗೂ ಭಾಷೆ, ಸಂಸ್ಕೃತಿ ಹಾಗೂ ಕೌಶಲ್ಯಗಳನ್ನು ಶಾಲಾ ಪಠ್ಯಕ್ರಮದಲ್ಲಿ ಸೇರಿಸುವ ನಿಟ್ಟಿನಲ್ಲಿ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗಳು, ಕ್ಷೇತ್ರ ಸಂಪನ್ಮೂಲ ಕೇಂದ್ರ ಹಾಗೂ ಸಮುಚ್ಚಯ ಕೇಂದ್ರಗಳು ಕಾರ್ಯ ನಿರ್ವಹಿಸಬೇಕು.
- ಗುಣಮಟ್ಟದ ಓಟದಲ್ಲಿ ಆಶ್ರಮ ಶಾಲೆಗಳು ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ವಿಷಯಗಳ ಬೋಧನೆಯಲ್ಲಿ ಹಿಂದುಳಿದಿವೆ. ಈ ಸಂಬಂಧಿ ಶಿಕ್ಷಕರಿಗೆ ತರಬೇತಿಯ ಅಗತ್ಯವಿದೆ
- ಸೋಲಿಗ ದನಿ ಮತ್ತು ಜೇನು ನುಡಿ ಎಂಬ ಬುಡಕಟ್ಟು ಜನರ ಭಾಷಾಧಾರಿತ ಪಠ್ಯವನ್ನು 20 ವರ್ಷಗಳ ಹಿಂದೆಯೇ ರಚಿಸಿದ್ದರೂ ಸರ್ಕಾರ ಅದನ್ನು ಇನ್ನೂ ಜಾರಿಮಾಡಿಲ್ಲ, ಇದನ್ನು ಅಂಗನವಾಡಿ ಹಂತದಿಂದ ೩ ನೇ ತರಗತಿಯವರೆಗೆ ಅನುಷ್ಠಾನ ಮಾಡಬೇಕಿದೆ.
- ಮೂಲಭೂತ ಸೌಕರ್ಯ ಅಭಿವೃದ್ಧಿ, ಶಿಕ್ಷಕರ ತರಬೇತಿ, ಬುಡಕಟ್ಟು ಸ್ನೇಹಿ ಪಠ್ಯ ಕ್ರಮ , ಬಹುವಿಷಯಗಳನ್ನು ಒಳಗೊಂಡ ಸಮಗ್ರ ಪಠ್ಯಕ್ರಮವನ್ನು ಒದಗಿಸುವುದು ಸರ್ಕಾರದ ಜವಾಬ್ದಾರಿ. ಆದರೆ ಶಿಕ್ಷಣದೆಡೆಗೆ ಸಮುದಾಯವನ್ನು ಪ್ರೇರೇಪಿಸುವ ಕಾರ್ಯವನ್ನು ಎನ್‌ಜಿಒಗಳು, ಬುಡಕಟ್ಟು ಹಕ್ಕುಗಳ ಹೋರಾಟಗಾರರು, ಬುಡಕಟ್ಟು ಶಿಕ್ಷಕರು ಮತ್ತು ಇತರ ಸಮಾನ ಮನಸ್ಕರನ್ನು ಒಳಗೊಂಡು ನಿರ್ವಹಿಸಲು ಶಿಕ್ಷಣ-ಸಮುದಾಯ ಯೋಜನೆಗಳನ್ನು ರಚಿಸಬೇಕಿದೆ.

- ಮೂಲ ನಿವಾಸಿ ಬುಡಕಟ್ಟುಗಳಾದ ಕಾಡುಕುರುಬರು, ಸೋಲಿಗರು, ಜೇನುಕುರುಬರ ಇತ್ಯಾದಿ, ಸಂಸ್ಕೃತಿಯಲ್ಲಿಯೇ ವೈವಿಧ್ಯತೆಯಿದ್ದು, ವ್ಯಕ್ತಿಗತವಾಗಿ ವಿಭಿನ್ನತೆಯಿಂದ ಕೂಡಿರುತ್ತದೆ. ಹೀಗಾಗಿ ಶಿಕ್ಷಕರಿಗೆ ಈ ವಿಚಾರಗಳು ತಿಳಿದಿರತಕ್ಕದ್ದು, ಜೇನು ಕುರುಬರು ಎಲ್ಲರೊಂದಿಗೂ ಬೆರೆಯುವುದು ಕಷ್ಟ, ಹೀಗಾಗಿ ಶಿಕ್ಷಕರು ಹೆಚ್ಚಿನ ಆದ್ಯತೆ ಹಾಗೂ ಮಕ್ಕಳ ಕೇಂದ್ರಿತ ಗಮನ ಕೊಡಬೇಕು. ಇವರನ್ನು ಶಾಲೆಗೆ ಕರೆತರಲು ವಿಶೇಷ ಯೋಜನೆಗಳು ಅಥವಾ ಚಟುವಟಿಕೆಗಳನ್ನು ಯೋಜಿಸಬೇಕಾಗಿದೆ.
- ಶಿಕ್ಷಕರಿಗೆ ತಿಂಗಳಿಗೊಮ್ಮೆ ಬುಡಕಟ್ಟು ಸಮುದಾಯಕ್ಕೆ ಸಂಬಂಧಪಟ್ಟ ವ್ಯಕ್ತಿಗಳ ಜೊತೆಗೆ ಚಟುವಟಿಕೆಗಳನ್ನು ನಡೆಸುವಂಥದ್ದು, ಇದರಲ್ಲಿ ಅವರ ಸಂಸ್ಕೃತಿ, ಜೀವನ ವಿಧಾನ, ಸಂಪ್ರದಾಯಗಳ ಬಗ್ಗೆ ಶಿಕ್ಷಕರೊಟ್ಟಿಗೆ ಚರ್ಚಿಸುವುದು.

## ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ

- ಶೈಕ್ಷಣಿಕ ಶಾಲಾ ಕೇಂದ್ರಗಳು ಬಹುದೂರ ಹಾಗೂ ಸುಮಾರು 14 ಕಿಲೋ ಮೀಟರ್ ಕಾಲ್ನಡಿಗೆಯಲ್ಲಿ ಕ್ರಮಿಸಬೇಕಾಗಿರುವುದು ಕಾಡು ಪ್ರಾಣಿಗಳ ಹಾವಳಿ, ಮಳೆಗಾಲದಲ್ಲಿ ಸೇತುವೆಗಳಿಲ್ಲದ ತೋಡು ನದಿಗಳ ದುಮ್ಮಿಕ್ಕುವ ನೀರನ್ನು ಪ್ರಾಣ ಕೈಯಲ್ಲಿಡಿದು ದಾಡಿ ಶಾಲಾ ಕೇಂದ್ರವನ್ನು ಮುಟ್ಟುವುದು ಮಕ್ಕಳು ಹಾಗೂ ಪೋಷಕರ ಬಹುದೊಡ್ಡ ಸಾಧನೆಯಾಗುತ್ತದೆ. ಮತ್ತೆ ಅದೇ ರೀತಿ ಸಂಜೆ ಅಂತಹ ಸವಾಲುಗಳನ್ನು ಎದುರಿಸಿ ಬೆಟ್ಟ ಹತ್ತಿಕಾಡು ಪ್ರಾಣಿಗಳ ಹಾವಳಿ ತಪ್ಪಿಸಿಕೊಂಡು ತೋಡು-ನದಿಗಳ ನೀರನ್ನು ದಾಟಿ ಮನೆಗೆ ಸೇರುತ್ತಾರೆ ವರ್ಷವಿಡೀ ಇದೇ ರೀತಿಯ ಪರಿಸ್ಥಿತಿಯನ್ನು ಹೊಂದಿರುತ್ತಾರೆ. ಹಾಗಾಗಿ ಶೈಕ್ಷಣಿಕವಾಗಿ ಇಂತಹ ವಾಸ್ತವ ಸತ್ಯಗಳು ಅಭಿವೃದ್ಧಿಗೆ ಮುಳ್ಳಾಗಿವೆ. ಅಲ್ಲದೇ ಸರ್ಕಾರದ ವಸತಿ ಶಾಲೆಗಳ ಮಾಹಿತಿಗಳು ಕೂಡ ಸಮುದಾಯಕ್ಕೆ ಪೂರಕವಾಗಿ ಸಿಗುತ್ತಿಲ್ಲ. ವಸತಿ ಶಾಲೆಗಳಲ್ಲಿ ಇರುವ ವಿದ್ಯಾರ್ಥಿಗಳು ವಸತಿ ಶಾಲೆಗಳಲ್ಲಿನ ಅವ್ಯವಸ್ಥೆಗಳಿಂದ ಅಲ್ಲಿಯೂ ವಿದ್ಯಾಭ್ಯಾಸ ಮುಂದುವರಿಸಲು ನಿರಾಕರಿಸುತ್ತಿದ್ದಾರೆ.
- ಕುಟುಂಬದಲ್ಲಿನ ಆರ್ಥಿಕ ತೊಂದರೆಗಳಿಂದ ಪ್ರೌಢಶಿಕ್ಷಣ ಪಡೆದ ನಂತರ ಪೋಷಕರು ಮಕ್ಕಳ ಶಿಕ್ಷಣ ಮೊಟಕುಗೊಳಿಸಿ ದುಡಿಮೆಗೆ ಕಳುಹಿಸುವುದು ಸಾಮಾನ್ಯವಾಗಿದೆ ಅಲ್ಲದೆ ಪೋಷಕರು ಹಲವು ಕಡೆ ಒತ್ತಾಯ ಪೂರ್ವಕವಾಗಿ ಮಕ್ಕಳನ್ನು ಶಾಲೆಯಿಂದ ಬಿಡಿಸಿದ ಉದಾಹರಣೆಗಳು ಕೂಡ ಕಂಡು ಬರುತ್ತದೆ
- ಮಕ್ಕಳ ಗೈರುಹಾಜರಾತಿಗೆ ಪೋಷಕರ ಬಡತನ, ಅನಕ್ಷರತೆ, ನಿರಾಸಕ್ತಿ, ಮಕ್ಕಳಿಗೆ ಆಸಕ್ತಿಯ ಕೊರತೆ, ಅನಾರೋಗ್ಯ, ಕಿರಿಯ ಮಕ್ಕಳ ಪೋಷಣೆ, ಮಕ್ಕಳನ್ನು ಆರ್ಥಿಕ ಚಟುವಟಿಕೆಗಳಿಗೆ ಬಳಸಿಕೊಳ್ಳುವುದು, ಪೋಷಕರ ವಲಸೆ, ಸಾರಿಗೆ ಸಮಸ್ಯೆ ಇನ್ನಿತರ ಅಂಶಗಳು ಕಾರಣವಾಗಿದೆ ಸಾಮಾನ್ಯವಾಗಿ ಅನಿಯಮಿತ ಹಾಜರಾತಿ ಹಿರಿಯ ಪ್ರಾಥಮಿಕ, ಪ್ರೌಢಶಾಲೆ ಹಂತದಲ್ಲಿ ಹೆಚ್ಚಿರುತ್ತದೆ. ಬುಡಕಟ್ಟುವಾರು ನೋಡಿದಾಗ ಸೋಲಿಗರಲ್ಲಿ ಅತಿ ಹೆಚ್ಚು ಮಕ್ಕಳು ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ, ಪೋಷಕರ ವಲಸೆ ಮತ್ತು ಸಾರಿಗೆ ಸಮಸ್ಯೆಯಿಂದಲೂ, ಬೆಟ್ಟಕುರುಬರ ಅತಿ ಹೆಚ್ಚಿನ ಮಕ್ಕಳು ಪೋಷಕರ ವಲಸೆ, ಬಡತನದಿಂದಲೂ ಮತ್ತು ಜೇನುಕುರುಬರ ಅತಿ ಹೆಚ್ಚು ಮಕ್ಕಳು ಆರ್ಥಿಕ ಚಟುವಟಿಕೆ, ಪೋಷಕರ ವಲಸೆ ಮತ್ತು ಬಡತನದಿಂದಲೂ ನಿಯಮಿತವಾಗಿ ಶಾಲೆಗೆ ಹಾಜರಾಗದಿರುವುದು ಕಂಡು ಬಂದಿದೆ.

## ಸಲಹೆಗಳು

- ಕೇರಳ ಮಾದರಿಯಲ್ಲಿ ಕಲಿಕೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ವಹಿಸಿ ವಸತಿ ಮತ್ತು ಆಹಾರದ ನಿರ್ವಹಣೆಯನ್ನು ಮಾತ್ರ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಯೋಜನೆಯಡಿ ತರಬೇಕು, ನಂಬಿಕೆ ಮತ್ತು ಭರವಸೆ ಮೂಡಿಸುವ ಶಿಕ್ಷಣ ಸಿಗಬೇಕು, ಕನಿಷ್ಠ ಪಿಯುಸಿ ತರಗತಿವರೆಗೆಯಾದರೂ ಮೂಲಭೂತ ಸೌಕರ್ಯವಿರುವ ಕೆಲವು ಆಶ್ರಮ ಶಾಲೆಗಳನ್ನು ತಾಲ್ಲೂಕಿನಲ್ಲಿ ಕನಿಷ್ಠ 3 – 4 ನ್ನಾದರೂ ಮೇಲ್ದರ್ಜೆಗೇರಿಸಿದರೆ ಆದಿವಾಸಿ ಮಕ್ಕಳಲ್ಲಿ ಓದುವವರ ಪ್ರಮಾಣ ಹೆಚ್ಚಾಗಲಿದೆ.
- ಆದಿವಾಸಿ ಮಕ್ಕಳಿಗೆ ಶಾಲಾಹಂತಗಳಲ್ಲಿ ಪ್ರೇರೇಣೆ ನೀಡಲು ಅವರದೇ ಜನಾಂಗದ ಉನ್ನತ ವಿದ್ಯಾಭ್ಯಾಸ ಮಾಡಿರುವ, ಸಾಧನೆ ಮಾಡಿರುವ ವ್ಯಕ್ತಿಗಳನ್ನು ಕರೆಸಿ ಪ್ರೇರೇಣೆ ತುಂಬುವುದು. ಗ್ರಾಮ್ ಸಂಸ್ಥೆಯು ಸುಗಮ್ಯಾ ಶಿಕ್ಷಾ ಕಾರ್ಯಕ್ರಮದಡಿಯಲ್ಲಿ ರೂಪಿಸಿರುವ ನನ್ನ ದೇಶ ನನ್ನ ಹಿರಿಮೆ ಮಾದರಿಯನ್ನು ಪರಾಮರ್ಶಿಸಬಹುದು.



# ಉನ್ನತ ಶಿಕ್ಷಣ-ಕೌಶಲ್ಯಾಭಿವೃದ್ಧಿ

- ಸಮುದಾಯದಿಂದ ಶಾಲಾ ಕೇಂದ್ರ, ಕಾಲೇಜು ಕೇಂದ್ರಗಳಿಗೆ ಕನಿಷ್ಟ 7 ರಿಂದ 10 ಕಿಲೋಮೀಟರ್ ದೂರವಿದೆ ವಿದ್ಯಾರ್ಥಿಗಳು ಪ್ರತಿನಿತ್ಯ ಕಾಲ್ನಡಿಗೆಯಲ್ಲಿಯೇ ಈ ದೂರವನ್ನು ಕ್ರಮಿಸಿ ವಿದ್ಯಾಭ್ಯಾಸ ಮುಂದುವರೆಸುತ್ತಿದ್ದಾರೆ. ಆದರೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಪಡೆದ ಮಕ್ಕಳು ಮುಂದೆ ವಿದ್ಯಾಭ್ಯಾಸ ಮುಂದುವರೆಸಲು ನಿರಾಕರಿಸುತ್ತಾರೆ. ಕಾರಣ ಕಾಲ್ನಡಿಗೆಯ ದೂರ ಹಾಗೂ ಸಾರಿಗೆ ವ್ಯವಸ್ಥೆ ಇಲ್ಲದಿರುವುದು ಮತ್ತು ಅನೇಕ ಕುಟುಂಬಗಳು ಕಾಲೇಜು ಶುಲ್ಕವನ್ನು ಪಾವತಿಸಲಾಗದ ಸ್ಥಿತಿಯಿಂದ ಮಕ್ಕಳನ್ನು ವಿದ್ಯಾಭ್ಯಾಸದಿಂದ ದೂರವಿಡುತ್ತಿರುವುದು ಅನಿವಾರ್ಯವಾಗಿದೆ.
- ಪ್ರದೇಶಗಳಲ್ಲಿ ರೋಲ್ ಮಾಡಲ್ (ಮಾದರಿ ವ್ಯಕ್ತಿ) ಗಳ ಕೊರತೆ ಎದ್ದು ಕಾಣುತ್ತದೆ.
- ಎರಡನೇ ತಲೆಮಾರಿನ ಬುಡಕಟ್ಟು ಸಮುದಾಯದವರೂ ಅಕುಶಲ ಕೂಲಿ ಕಾರ್ಮಿಕರಾಗುತ್ತಿದ್ದಾರೆ.
- ಹೆಚ್ಚಿನ ವ್ಯಾಸಂಗಕ್ಕಾಗಿ ನಗರದ ಶಿಕ್ಷಣ ಸಂಸ್ಥೆಗಳನ್ನು ಸೇರಿದ ವಿದ್ಯಾರ್ಥಿಗಳಿಗೆ ಮಾನಸಿಕ ಬೆಂಬಲ, ಕಾಳಜಿ ಪ್ರೋತ್ಸಾಹ ಸಿಗುತ್ತಿಲ್ಲ. ಹೀಗಾಗಿ ಅವರು ಶಿಕ್ಷಣವನ್ನು ಅರ್ಧಕ್ಕೇ ಮೊಟಕುಗೊಳಿಸುತ್ತಿದ್ದಾರೆ. ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಈ ಬಗ್ಗೆ ಗಮನ ಹರಿಸಬೇಕು.
- ಕೋರ್ಸ್ ಮುಗಿಸಿದ ನಂತರ ಮುಂದೇನು ಎಂಬುದು ಗಿರಿಜನ ವಿದ್ಯಾರ್ಥಿಗಳಿಗೆ ತಿಳಿದಿರುವುದಿಲ್ಲ. ಈ ಕುರಿತು ಅವರಿಗೆ ತರಬೇತಿ ಅಗತ್ಯವಿದೆ ಇದರೊಂದಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ತಯಾರಿಯನ್ನು ನಡೆಸಲು ಕಾರ್ಯಾಗಾರಗಳ ಅಗತ್ಯವಿದೆ.
- ಸರ್ಕಾರದ ಬ್ಯಾಂಕ್ ಲೋನ್ ಹಾಗೂ ಇತರ ಸೌಲಭ್ಯಗಳನ್ನು ಪಡೆಯಲು ಭದ್ರತೆಗಾಗಿ ಬಹುಪಾಲು ಗಿರಿಜನರಲ್ಲಿ ಯಾವುದೇ ಆಸ್ತಿ/ಸ್ವತ್ತು ಇಲ್ಲ. ಉನ್ನತ ಶಿಕ್ಷಣದಲ್ಲಿ ಎದುರಾಗುವ ಖರ್ಚುಗಳನ್ನು ಹೊಂದಿಸಲು ಹಾಗೂ ಸಾಲ ಪಡೆಯಲು ಆಗುತ್ತಿಲ್ಲ.

## ಸಲಹೆ

- ಬುಡಕಟ್ಟು ಹಾಡಿಗಳಲ್ಲಿ ಬೆರಳೆಣಿಕೆ ಮಂದಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಮತ್ತು ಪದವಿ ಶಿಕ್ಷಣ ಪಡೆದವರಿದ್ದು, ಅಂತಹವರನ್ನು ಗುರುತಿಸಿ ಸೂಕ್ತ ತರಬೇತಿ ನೀಡಿ ಸರ್ಕಾರಿ ಉದ್ಯೋಗ ನೀಡಬೇಕು ಮತ್ತು ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರಸಿ ಅವರನ್ನು ಬುಡಕಟ್ಟು ಪ್ರದೇಶಗಳಿಗೆ ಮಾದರಿ ವ್ಯಕ್ತಿಯನ್ನಾಗಿ ರೂಪಿಸಬೇಕು. ಆಗ ಅವರನ್ನು ನೋಡಿ ಇತರರು ನಾವು ಓದಬೇಕು ಮತ್ತು ನಮ್ಮ ಮಕ್ಕಳನ್ನು ಉತ್ತಮವಾಗಿ ಓದಿಸಬೇಕೆಂಬ ಬಯಕೆ ಬರುತ್ತದೆ.
- ಅರಣ್ಯವಾಸಿ ಬುಡಕಟ್ಟು ಜನರಿಗೆ ಶಿಕ್ಷಣದಲ್ಲಿ ಮತ್ತು ಉದ್ಯೋಗದಲ್ಲಿ ಪ್ರತ್ಯೇಕವಾದ ಮೀಸಲಾತಿಯನ್ನು ನೀಡಬೇಕು.
- ಕಾಲೇಜುಗಳಿಗೆ ನೀಡುತ್ತಿರುವ ಅನುಧಾನಗಳು ಸಂಯೋಜನೆಯ ಕೊರತೆಯಿಂದ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ
- ಆದಿವಾಸಿಗಳಲ್ಲಿ ಕೌದಿ ಹೊಲಿಯುವಿಕೆ, ಬಿದಿರಿನ ಬುಟ್ಟಿ ಹೆಣಿಗೆ, ಮರದ ಹಾಗು ಬಿದಿರಿ ಸಾಮಾಗ್ರಿಗಳ ತಯಾರಿಕೆ ಹೀಗೆ ಹಲವಾರು ಕೌಶಲ್ಯಗಳಿವೆ. ಈ ಕೌಶಲ್ಯಗಳಿಗೆ ಪೂರಕವಾಗಿ ಡಿಪ್ಲೋಮಾ ಕೋರ್ಸ್ ಗಳನ್ನು ಅಭಿವೃದ್ಧಿಪಡಿಸಿದಾಗ ಅವರು ಆಸಕ್ತಿಯಿಂತ ಆ ವಿಷಯಗಳನ್ನು ಅಭ್ಯಸಿಸಬಲ್ಲರು ಮತ್ತು ಅವರ ಉತ್ಪನ್ನಕ್ಕೂ ಮೌಲ್ಯ ಹೆಚ್ಚಾಗುತ್ತದೆ
- ವಿದ್ಯಾರ್ಥಿಗಳ ಶೈಕ್ಷಣಿಕಾಭಿವೃದ್ಧಿಗಾಗಿ ಕೊಡಮಾಡುವ ಆರ್ಥಿಕ ನೆರವು ಯೋಜನೆಯಲ್ಲಿ ಮೂಲ ನಿವಾಸಿಗಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಾಧನ್ಯತೆ ಸಿಗುವಂತೆ ಮಾಡುವುದು.
- ವೃತ್ತಿ ಶಿಕ್ಷಣ ಹಾಗೂ ವೃತ್ತಿ ಮಾರ್ಗದರ್ಶನವನ್ನು ನೀಡಬೇಕು ಹಾಗೂ ಉದ್ಯಮಶೀಲತಾ ತರಬೇತಿಯನ್ನು ನೀಡಬೇಕು.



## ಹೆಣ್ಣು ಮಕ್ಕಳ ಶಿಕ್ಷಣ

- ಬುಡಕಟ್ಟುಗಳಲ್ಲಿಯೂ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳೇ ಮಧ್ಯಂತರದಲ್ಲಿ ಶಾಲೆ ಬಿಟ್ಟಿರುವುದು ಕಂಡು ಬಂದಿದೆ. ಅತಿ ಹೆಚ್ಚು ಮಕ್ಕಳು ಮಧ್ಯಂತರದಲ್ಲಿ ಶಾಲೆ ಬಿಡುವುದಕ್ಕೆ ಪೋಷಕರ ನಿರಾಸಕ್ತಿ ಮತ್ತು ಅನಕ್ಷರತೆ, ಬಡತನ, ಆರ್ಥಿಕ ಚಟುವಟಿಕೆಗೆ ಮಕ್ಕಳನ್ನು ಬಳಸಿಕೊಳ್ಳುವಿಕೆ, ಸಾರಿಗೆ ಕೊರತೆ, ಶಿಕ್ಷಕರ ಭಯ ಮತ್ತು ಉದಾಸೀನತೆಯಿಂದ ಶಾಲೆ ಬಿಟ್ಟಿರುವುದು ಕಂಡು ಬಂದಿದೆ. ಹೆಣ್ಣು ಮಕ್ಕಳನ್ನು ಮನೆ ಕೆಲಸಕ್ಕೂ ಬಳಸಿಕೊಳ್ಳುವುದಕ್ಕಾಗಿ ಶಾಲೆಗೆ ಕಳುಹಿಸುವುದಿಲ್ಲ
- ಬೆರಳೆಣಿಕೆಯಷ್ಟು ಹೆಣ್ಣು ಮಕ್ಕಳು ಉನ್ನತ ಶಿಕ್ಷಣಕ್ಕೆ ಹೋಗುತ್ತಿದ್ದು ಬುಡಕಟ್ಟು ಸಮುದಾಯದಲ್ಲಿ ಬಾಲ್ಯ ವಿವಾಹ ಪದ್ದತಿಗಳು ಇನ್ನೂ ಸಹ ಕಾಣಸಿಗುತ್ತಿವೆ,
- ಪ್ರೌಢಶಾಲೆ ಹಾಗೂ ಅದಕ್ಕಿಂತ ಹೆಚ್ಚಿನ ವಿದ್ಯಾಭ್ಯಾಸ ನೀಡಬಲ್ಲ ಸಂಸ್ಥೆಗಳು ಆದಿವಾಸಿ ಸಮುದಾಯಗಳಿಂದ ದೂರವಿರುವುದು. ಹಾಸ್ಟೆಲ್ ಗಳು ಸಹ ಆದಿವಾಸಿ ಮಕ್ಕಳಿಗೆ ಬಹಳ ದೂರವೇ ಇವೆ.
- ಆದಿವಾಸಿ ಸಮುದಾಯಗಳು ವಾಸಿಸುವ ಪ್ರದೇಶಗಳಿಗೆ ಸಾರಿಗೆ ಅಲಭ್ಯತೆಯ ಸಮಸ್ಯೆಗಳು ಸಹ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಕುಂಠಿತಕ್ಕೆ ಕಾರಣವಾಗಿದೆ.
- ಅಂಗನವಾಡಿಗಳಲ್ಲಿ ಆ ಹಂತದಲ್ಲಿ ಮಾಸಿಕ ಕಿಶೋರಿಯರ ಸಭೆ ಹಾಗೂ ಪ್ರೋತ್ಸಾಹಗಳ ಕೊರತೆ ಇರುವುದು ಹೆಣ್ಣು ಮಕ್ಕಳ ವಿದ್ಯಾಭ್ಯಾಸದಲ್ಲಿ ಕಡಿಮೆ ಸಾಧನೆಗಳಿಗೆ ಕಾರಣವಾಗಿದೆ.

### ಸಲಹೆಗಳು

- ಸ್ಥಳೀಯವಾಗಿ ಪ್ರೌಢಶಾಲೆ ಲಭ್ಯವಿಲ್ಲದಿದ್ದಲ್ಲಿ, ಕಡ್ಡಾಯವಾಗಿ ಏಳು/ಎಂಟನೇ ತರಗತಿ ತೇರ್ಗಡೆಹೊಂದಿದ ಹೆಣ್ಣು ಮಕ್ಕಳನ್ನು ಪ್ರೌಢಶಾಲೆಗೆ ದಾಖಲಿಸಲು ಮತ್ತು ನಿಯತವಾಗಿ ಹಾಜರಾಗುವಂತೆ ನೋಡಿಕೊಳ್ಳಲು ಉಸ್ತುವಾರಿ ನೇಮಿಸುವ ಉಪಕ್ರಮ ರಚಿಸುವುದು.
- ವಸತಿ ನಿಲಯಗಳಲ್ಲಿ ಹೆಣ್ಣು ಮಕ್ಕಳಿಗೆ ಸುರಕ್ಷಿತ ಕ್ರಮಗಳು ಹಾಗೂ ಅವರಿಗೆ ಬೇಕಾಗುವಂತಹ ವ್ಯವಸ್ಥೆಗಳನ್ನು ಮಾಡಿಕೊಡಬೇಕು.

## ಪಠ್ಯಪುಸ್ತಕ -ಕಲಿಕೆ

- ಲಭ್ಯವಿರುವ ಬೋಧನಾ ಕಲಿಕಾ ಸಾಮಾಗ್ರಿಗಳು ಬುಡಕಟ್ಟು ಸಮುದಾಯದ ಸಂಸ್ಕೃತಿ, ಸಮಾಜ ಮತ್ತು ಆರ್ಥಿಕ ಜೀವನಕ್ಕೆ ಹತ್ತಿರವಾಗಿರದ ಕಾರಣ ಮಕ್ಕಳು ಸುಲಭವಾಗಿ ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಹೀಗೆ ಬಹುತೇಕ ಅಂಶಗಳು ಬುಡಕಟ್ಟು ಮಕ್ಕಳ ಕಲಿಕಾ ಮಟ್ಟ ಹಿಂದುಳಿದಿರಲು ಕಾರಣವಾಗಿವೆ. ಇನ್ನು ಪ್ರತ್ಯೇಕವಾಗಿ ಆಶ್ರಮಶಾಲೆಗಳ ಸ್ಥಿತಿಗತಿಯನ್ನು ಗಮನಿಸಿದಾಗ ಇವು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ.
- ಮಕ್ಕಳ ಶೈಕ್ಷಣಿಕ ಸಾಧನೆ ಬಗ್ಗೆ ಬಹುತೇಕ ಶಿಕ್ಷಕರು ಕನ್ನಡ, ಪರಿಸರ ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯದಲ್ಲಿ ಉತ್ತಮ ಮತ್ತು ಸಾಧಾರಣವಾಗಿದೆಯೆಂದೂ, ಸಾಮಾನ್ಯ ವಿಜ್ಞಾನ, ಗಣಿತ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಮಕ್ಕಳ ಕಲಿಕಾ ಮಟ್ಟ ತೀರಾ ಹಿಂದುಳಿದಿದ್ದಾರೆ. ಮಕ್ಕಳ ಕಲಿಕೆ ಹಿಂದುಳಿದಿರುವಿಕೆಗೆ ಮಕ್ಕಳ ಆಸಕ್ತಿ ಕೊರತೆ, ಪೋಷಕರ ವಲಸೆ ಮತ್ತು ಪೋಷಕರ ಅನಕ್ಷರತೆ, ನಿರ್ಲಕ್ಷ್ಯತನ ಹಾಗೂ ಕಡಿಮೆ ಮಟ್ಟದ ಗ್ರಹಣಶಕ್ತಿ ಜೊತೆಗೆ ಕೆಳಮಟ್ಟದ ಆರೋಗ್ಯವು ಸಹಾ ಪ್ರಮುಖ ಕಾರಣಗಳಲ್ಲೊಂದಾಗಿದೆ.

### ಸಲಹೆಗಳು

- ಪ್ರಸ್ತುತವಿರುವ ಪಠ್ಯಕ್ರಮ ಬುಡಕಟ್ಟು ಮಕ್ಕಳ ಜೀವನ ವಿಧಾನಕ್ಕನುಗುಣವಾಗಿಲ್ಲದ ಕಾರಣ ಮಕ್ಕಳಲ್ಲಿ ಕಲಿಕಾ ಆಸಕ್ತಿ ಕಡಿಮೆಯಿದೆ. ಆದ್ದರಿಂದ ಬುಡಕಟ್ಟು ಸಮಾಜದ ಸಂಸ್ಕೃತಿಗೆ ಅನುಗುಣವಾಗಿ ಮೌಖಿಕ ಸಾಹಿತ್ಯ, ಕಥೆಗಳು, ಸ್ಥಳೀಯ ಪರಿಸರ, ಬುಡಕಟ್ಟು ಜೀವನ ವಿಧಾನ, ನೈತಿಕ ಮೌಲ್ಯ, ಶಿಸ್ತು ಮತ್ತು ಶಿಕ್ಷಣದ ಮಹತ್ವವನ್ನು ತಿಳಿಸುವಂತಹ ಪಠ್ಯಕ್ರಮವನ್ನು ಅಳವಡಿಸುವುದು ಮತ್ತು ಪಠ್ಯಕ್ರಮಕ್ಕನುಗುಣವಾಗಿ ಬೋಧನೋಪಕರಣಗಳನ್ನು ಬಳಸುವುದು ಅವಶ್ಯಕವಾಗಿದೆ. ಇದರೊಂದಿಗೆ ಬುಡಕಟ್ಟು ಮಕ್ಕಳ ಕೌಶಲ್ಯಕ್ಕನುಗುಣವಾಗಿ ವೃತ್ತಿ ತರಬೇತಿಗಳನ್ನು ಶಿಕ್ಷಣದಲ್ಲಿ ಅಳವಡಿಸಿಕೊಳ್ಳುವುದು ಸಹ ಅತ್ಯವಶ್ಯಕವಾಗಿದೆ.



# ಒಟ್ಟಾರೆ ಸಲಹೆಗಳು

- **ಅರಿವು ಹಾಗೂ ಸಾಮಾಜಿಕ ಗುಂಪು:** ಬುಡಕಟ್ಟು ಮಕ್ಕಳ ಶಿಕ್ಷಣದಲ್ಲಿ ಪೋಷಕರ ಪಾತ್ರ ಮಹತ್ತರವಾದದ್ದು, ಆದರೆ ಬಹುತೇಕ ಪೋಷಕರು ಅನಕ್ಷರಸ್ಥರೂ ಶಿಕ್ಷಣದ ಮಹತ್ವದ ಬಗ್ಗೆ ಅರಿವಿಲ್ಲದವರೂ ಆಗಿರುವುದರಿಂದ ಮಕ್ಕಳ ಶಿಕ್ಷಣದ ಬಗ್ಗೆ ಆಸಕ್ತಿ ವಹಿಸುವುದಿಲ್ಲ ಆದ್ದರಿಂದ ಪೋಷಕರಿಗೆ ಮತ್ತು ಮಕ್ಕಳಿಗೆ ಶೈಕ್ಷಣಿಕ ಅರಿವು ಮತ್ತು ಮಹತ್ವವನ್ನು ತಿಳಿಸಿಕೊಡಬೇಕು. ಬುಡಕಟ್ಟು ಪ್ರದೇಶದಲ್ಲಿ ತಾಯಂದಿರ ಸಾಮಾಜಿಕ ಗುಂಪುಗಳು (ಸ್ವ ಸಹಾಯ ಗುಂಪುಗಳು) ರಚಿಸಿ ಉತ್ತಮ ವೇದಿಕೆಯಾಗುವುದು.

- **ಆರ್ಥಿಕಾಭಿವೃದ್ಧಿ ಯೋಜನೆಗಳು:** ಬುಡಕಟ್ಟು ಜನರು ಕಡು ಬಡತನದಲ್ಲಿ ಜೀವನ ಸಾಗಿಸುತ್ತಿದ್ದು, ಜೀವನ ನಿರ್ವಹಣೆಗಾಗಿ ಮಕ್ಕಳನ್ನು ಆರ್ಥಿಕ ಚಟುವಟಿಕೆಗಳಿಗೆ ಮತ್ತು ಪ್ರಾಣಿ ಸಾಕಾಣಿಕೆಗೆ ಬಳಸಿ ಕೊಳ್ಳುತ್ತಿದ್ದಾರೆ ಹಾಗೂ ಕೂಲಿಗಾಗಿ ನೆರೆಯ ರಾಜ್ಯಗಳಿಗೆ ೩ ರಿಂದ ೫ ತಿಂಗಳು ವಲಸೆ ಹೋಗುತ್ತಾರೆ. ಇವು ಮಕ್ಕಳ ಶಿಕ್ಷಣದ ಮೇಲೆ ವ್ಯತಿರಿಕ್ತವಾದ ಪರಿಣಾಮವನ್ನು ಬೀರುತ್ತದೆ. ಆದರಿಂದ ಸರ್ಕಾರ ಅವರಿಗೆ ಸ್ಥಳೀಯವಾಗಿ ಉದ್ಯೋಗ ದೊರಕಿಸಿಕೊಡುವುದರ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕಾಭಿವೃದ್ದಿಗೆ ಪೂರಕವಾದ ಯೋಜನೆಗಳನ್ನು ರೂಪಿಸಿ, ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಅವರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಧೃಡಗೊಳಿಸಬೇಕು.

- **ನೀತಿಯಲ್ಲಿ ಸಮುದಾಯದ ಧ್ವನಿ:** ಶಿಕ್ಷಣ ನೀತಿಗಳನ್ನು ರೂಪಿಸುವಾಗ ಮತ್ತು ಅನುಷ್ಠಾನಗೊಳಿಸುವಾಗ ಮಾನವಶಾಸ್ತ್ರಜ್ಞರು, ಶಿಕ್ಷಣ ತಜ್ಞರು ಮತ್ತು ಬುಡಕಟ್ಟು ಪ್ರತಿನಿಧಿಗಳ ಅಭಿಪ್ರಾಯ ಮತ್ತು ಸಲಹೆಗಳನ್ನು ಪಡೆಯಬೇಕು.

- **ಸಂಶೋಧನಾ ಅಗತ್ಯಗಳು:** ಸದ್ಯ ಬುಡಕಟ್ಟು ಜನರ ಶಿಕ್ಷಣ ಮತ್ತು ಅಭಿವೃದ್ಧಿಯನ್ನು ಕರಾರುವಕ್ಕಾಗಿ ತಿಳಿಸಲು ಪ್ರತ್ಯೇಕ ಸಂಶೋಧನೆ/ದತ್ತಾಂಶದ ಕೊರತೆಯಿದೆ. ಬುಡಕಟ್ಟು ಜನರ ಶೈಕ್ಷಣಿಕ ಸ್ಥಿತಿಗತಿ, ಸವಾಲುಗಳನ್ನು ಕುರಿತು ಪತ್ರ್ಯೇಕ ಸಂಶೋಧನೆಯಾಗಬೇಕಿದೆ.

- **ನೀತಿ ನಿರೂಪಣಾ ಮಟ್ಟದಲ್ಲಿ ಆಗಬೇಕಿರುವ ಬದಲಾವಣೆ :** ಆಶ್ರಮ ಶಾಲೆಯ ಸಂಯೋಜಿತ ಉಪಕ್ರಮ: ಆಶ್ರಮ ಶಾಲೆಗಳು ಸಾರ್ವಜನಿಕ ಶಿಕ್ಷಣ ಇಲಾಖೆಯಡಿ ಬರಬೇಕು. ಶೈಕ್ಷಣಿಕ ಕಾರ್ಯಕ್ರಮಗಳ ಅನುಷ್ಠಾನ ಶಿಕ್ಷಣ ಇಲಾಖೆಯದ್ದಾದರೆ, ಇನ್ನಿತರ ಪೂರಕ ಕಾರ್ಯಕ್ರಮಗಳ ಅನುಷ್ಠಾನ ಸಮಾಜ ಕಲ್ಯಾಣ ಇಲಾಖೆಯ ಜವಾಬ್ದಾರಿಯಾಗಬೇಕು. ಬುಡಕಟ್ಟು ಸಮುದಾಯದ ಆಶ್ರಮ ಶಾಲೆಗಳು ಸ್ವತಂತ್ರ ಶಿಕ್ಷಣ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಬೇಕು

- **ಎನ್ ಇ ಪಿ ಅನುಷ್ಠಾನದಲ್ಲಿ :** ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಮೂಲ ಆದಿವಾಸಿ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸುವಾಗ ಬುಡಕಟ್ಟು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಪ್ರತ್ಯೇಕ ಕ್ರಿಯಾ ಯೋಜನೆಯನ್ನು ರಚಿಸಿ, ಕೇಂದ್ರೀಯ ಶಾಲೆಗಳ ಮಾದರಿಯ ಶಾಲೆಗಳನ್ನು ಸ್ಥಾಪಿಸಿ ಶೈಕ್ಷಣಿಕ ಅಭಿವೃದ್ಧಿ ಮಾಡುವುದು.

- **ಕೌಶಲ್ಯ:** ಕೌಶಲ್ಯ ಅಭಿವೃದ್ಧಿಗಾಗಿ ಇಲಾಖೆಯ ಸಂಯೋಜನೆಯಲ್ಲಿ ಬುಡಕಟ್ಟು ಮಕ್ಕಳಿಗೆ ಅವರ ಸಂಸ್ಕೃತಿ, ಜೀವನಕ್ರಮದಲ್ಲಿ ಇರುವ ಕೌಶಲ್ಯಗಳನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಯೋಜನೆಗಳನ್ನು ರೂಪಿಸುವುದು.

## ವಿಷಯ ಮಂಡನೆಕಾರರು

1. ಶ್ರೀಯುತ ಮರಿಸ್ವಾಮಿ, ಸದಸ್ಯರು, ಮಕ್ಕಳ ಹಕ್ಕು ಆಯೋಗ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ ೨೦೨೦ ರಾಜ್ಯ ಅನುಷ್ಠಾನ ಕಾರ್ಯಪಡೆ ಸದಸ್ಯರು, ಬೆಂಗಳೂರು
2. ಡಾ.ಮಾದೇಗೌಡ, ಕಾರ್ಯದರ್ಶಿ, ಜಿಲ್ಲಾ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘ, ಚಾಮರಾಜನಗರ
3. ರಂಗ ಮಾದಪ್ಪ, ಶಿಕ್ಷಕರು, ಆಶ್ರಮ ಶಾಲೆ ಪೊನ್ನಾಚಿ,
4. ಶೈಲೇಂದ್ರಕುಮಾರ್, ಅರಣ್ಯ ಮೂಲ ಬುಡಕಟ್ಟುಗಳ ಒಕ್ಕೂಟ
5. ಕೃಷ್ಣಮೂರ್ತಿ, ಖಜಾಂಚಿ, ರಾಜ್ಯ ಮೂಲ ಆದಿವಾಸಿ ವೇದಿಕೆ ಕರ್ನಾಟಕ
6. ಶ್ರೀ ಬಸವರಾಜ್, ವಿಶ್ರಾಂತ ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
7. ಡಾ.ವೀರಭದ್ರನಾಯಕ್, ಸಂಯೋಜಕರು, ಪುನರ್‌ಚಿತ್ ಸಂಸ್ಥೆ, ಚಾಮರಾಜನಗರ
8. ಶ್ರೀಯುತ ಮುತ್ತಯ್ಯ, ಕಾರ್ಯದರ್ಶಿ, ರಾಜ್ಯ ಮೂಲ ಆದಿವಾಸಿ ವೇದಿಕೆ ಕರ್ನಾಟಕ
9. ಗಣೇಶ್, ನಿವೃತ್ತ ಶಿಕ್ಷಕರು, ಹೆಚ್‌ಡಿ ಕೋಟೆ
10. ಶ್ರೀಯುತ ಮಾರ, ಆದಿವಾಸಿ ಶಿಕ್ಷಕರು, ಬಸವನಗಿರಿ ಹಾಡಿ, ಹೆಚ್ ಡಿ ಕೋಟೆ, ಮೈಸೂರು
11. ಶ್ರೀಯುತ ಬೆಳ್ಳಶೆಟ್ಟಿ, ವಿಶ್ರಾಂತ ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
12. ಶ್ರೀಯುತ ರಾಮಚಾರಿ, ನಿವೃತ್ತ ಶಿಕ್ಷಕರು, ವಿವೇಕಾನಂದ ಗಿರಿಜನ ಶಾಲೆ, ಬೆಳಗಿರಿ ರಂಗನ ಬೆಟ್ಟ, ಚಾಮರಾಜನಗರ
13. ಡಾ. ಮಹೇಂದ್ರ ಕುಮಾರ್, ಯೋಜನಾ ನಿರ್ದೇಶಕರು, ಗ್ರೀನ್ ಇಂಡಿಯಾ, ಬುಡಕಟ್ಟು ಸಬಲೀಕರಣ ಯೋಜನೆ.
14. ಡಾ.ರಾಜೇಂದ್ರಪ್ರಸಾದ್.ಪಿ ಮುಖ್ಯಸ್ಥರು, ಸಮುದಾಯ ಸಮಾಲೋಚನಾ ವಿಭಾಗ, ಗ್ರಾಸ್ ರೂಟ್ಸ್ ರಿಸರ್ಚ್ ಅಂಡ್ ಅಡ್ವೊಕಸಿ ಮೂವ್ಮೆಂಟ್
15. ಡಾ.ಪದ್ಮಾವತಿ, ಶಿಕ್ಷಣ ತಜ್ಞರು, ರಾಷ್ಟ್ರೀಯ ಶಿಕ್ಷಣ ನೀತಿ ೨೦೨೦ ರಾಜ್ಯ ಅನುಷ್ಠಾನ ಕಾರ್ಯಪಡೆ ಸದಸ್ಯರು, ಬೆಂಗಳೂರು
16. ಜ್ಯೋಲಿಯಾನ ಸಿದ್ಧಿ, ಬುಡಕಟ್ಟು ಮಹಿಳೆ, ಉತ್ತರ ಕನ್ನಡ
17. ಶ್ರೀ ಚಂದ್ರಮ್ಮ ಶಿಕ್ಷಕರು, ರಾಚಪ್ಪಾಜಿ ನಗರ
18. ಡಾ. ಶೀಲಾಕರೆ, ಪರಿಣಿತರು, ಶಿಕ್ಷಣ ಅಭಿವೃದ್ಧಿ ಮತ್ತು ನಿರ್ವಹಣೆ, ಮೈಸೂರು.
19. ಡಾ. ಆರ್ ವಿ ಚಂದ್ರಶೇಖರ್, ತಳಸಮುದಾಯಗಳ ಅಧ್ಯಯನ ಕೇಂದ್ರ, ರಾಷ್ಟ್ರೀಯ ಕಾನೂನು ಶಾಲೆ, ಭಾರತ ವಿಶ್ವವಿದ್ಯಾಲಯ, ಬೆಂಗಳೂರು.
20. ಶ್ರೀಯುತ ಅಚ್ಯುತ ರಾವ್, ಜನಾಭಿವೃದ್ಧಿ ಪರಿಣಿತರು, ರೈಸ್ ಪೌಂಡೇಷನ್
21. ಡಾ.ಮಾದೇಗೌಡ, ಕಾರ್ಯದರ್ಶಿ, ಜಿಲ್ಲಾ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘ, ಚಾಮರಾಜನಗರ
22. ಶ್ರೀಯುತ ಮತ್ತಾಡಿ ಕೊರಗ, ಧಕ್ಷಿಣ ಕನ್ನಡ
23. ಡಾ. ಕೃಷ್ಣ ಮೂರ್ತಿ ಇರುಳಿಗ, ಆದಿವಾಸಿ ಮುಖಂಡರು

**GRAAM is a development research and public policy engagement initiative. It was founded with the aim of nurturing a space for evolution of public policy embodying community 'voice'. A space based in empiricism, democratic principles and a progressive interaction of the key stakeholders of development including the state, citizenry, private sector, civil society and academia.**

## GRAAM's FOOTPRINT




graam.org.in

**Grassroots Research And Advocacy Movement(GRAAM)**
Administrative Office : CA-2, KIADB Industrial Housing Area, Hebbal Ring Road, Mysuru, Karnataka, India - 570016
Mob:9686666306

Bengaluru Office : #282, 34th Cross, 9th Main, 4th Block, Jayanagara, Bengaluru - 560011
Tel: 080 26655055

Jharkhand Office: FLAT NO 203, Prithvi Homes, Near Dipatoli Bandhgadi,Gate No-1, Ranchi- 834009.

graam@graam.org.in | www.graam.org.in | GRAAM India | @graamresearch | https://googl/tSWoUM